ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಕೆ.ಆರ್.ನಗರ

ಸಿ.ಸಿ.ನಂ. **85/2022**

| | | |
|---|---|---|
| ಸಾಕ್ಷಿಯ ಹೆಸರು | ಪ್ರಕಾಶ್ ಎಂ.ಕೆ | |
| ತಂದೆ ಹೆಸರು | ಲೇ. ಕೃಷ್ಣಮೂರ್ತಿ | |
| ವಯಸ್ಸು | **53** | |
| ಉದ್ಯೋಗ | ಬೇಲಿಪ್, ಸಕಲೇಶಪುರ ನ್ಯಾಯಾಲಯ. | ಡಿ.ಡಬ್ಲ್ಯೂ 1 |
| ವಾಸ ಸ್ಥಳ | ಚನ್ನರಾಯಣಪಟ್ಟಣ, ಹಾಸನ ಜಿಲ್ಲೆ. | |

ದಿನಾಂಕಃ **23-11-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಆರೋಪಿದಾರರ ಪರ ಶ್ರೀ ಎಸ್.ಎಚ್.ಎಲ್ ವಕೀಲರಿಂದಃ

1) ನನಗೆ ಪಿರ್ಯಾದುದಾರರು ಯಾವುದೇ ಹಣ ನೀಡಿರುವುದಿಲ್ಲ. ನಾನು ಪಿರ್ಯಾದುದಾರರ ಬಳಿ ಯಾವುದೇ ಸಾಲ ಕೇಳಿರುವುದಿಲ್ಲ. ನಾನು ಪಿರ್ಯಾದುದಾರರಿಗೆ ಯಾವುದೇ ಚೆಕ್ಕನ್ನು ನೀಡಿರುವುದಿಲ್ಲ. ನಾನು ಪಿರ್ಯಾದುದಾರರ ಬಳಿ ಹಣ ಪಡೆದು ಚೆಕ್ಕನು ನೀಡಿರುವುದಿಲ್ಲ. ನನ್ನ ಚೆಕ್ಕ ಕಳೆದು ಹೋಗಿದ್ದು ಅದರ ಬಗ್ಗೆ ಬ್ಯಾಂಕಿಗೆ ಮಾಹಿತಿ ನೀಡಿರುತ್ತೇನೆ. ಪಿರ್ಯಾದುದಾರರು ನೀಡಿದ ನೋಟಿಸಿಗೆ ನಾನು ಪ್ರತ್ಯುತ್ತರ ನೀಡಿರುತ್ತೇನೆ. ಪಿರ್ಯಾದುದಾರರು ನನಗೆ ಪರಿಚಯ ಇರುವುದಿಲ್ಲ. ಪಿರ್ಯಾದುದಾರರ ತಮ್ಮನಾದ ಸುರೇಶ ಎಂಬುವವರು ನಮ್ಮ ಮನೆಯ ಪಕ್ಕದಲ್ಲಿ ಔಷಧಿ ಅಂಗಡಿಯನ್ನು ಇಟ್ಟುಕೊಂಡಿರುತ್ತಾರೆ. ಸದರಿ ಸುರೇಶ ನನಗೆ 20 ವರ್ಷಗಳಿಂದ ಪರಿಚಯ. ನನ್ನ ಚೆಕ್ಕ ಬುಕ್ ನಮ್ಮ ಮನೆಯನ್ನು ಕೆಡವಿ ಬಿಳಿಸುವಾಗ ಕಳೆದು ಹೋಗಿರುತ್ತದೆ.

2) ಪಿರ್ಯಾದುದಾರರ ಕೆ. ಆರ್ ನಗರದ ಅರಕೇಶ್ವರ ಬಡಾವಣೆಯಲ್ಲಿ ಅವರ ಮನೆಯಲ್ಲಿ ಬೇರೆಯವರು ಯಾರೋ ಬಾಡಿಗೆ ಇದ್ದು, ಅಲ್ಲಿ ಪಿರ್ಯಾದುದಾರರು ವಾಸವಾಗಿರುವುದಿಲ್ಲ. ಪಿರ್ಯಾದುದಾರರ ನೀಡಿದ ನೊಟಿಸನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಪಿರ್ಯಾದುದಾರರು ನನ್ನ ಚೆಕ್‌ನ್ನು ಬ್ಯಾಂಕಿಗೆ ಸಲ್ಲಿಸಿದಾಗ ಏನು ಹಿಂಬರಹ ಬಂದಿರುತ್ತದೆ ಎಂದು ತಿಳಿದುಕೊಂಡಿರುತ್ತೇನೆ. ಅದು

ಸ್ಟಾಪ್ ಪೇಮೆಂಟ್ ಎಂದು ಬಂದಿರುತ್ತದೆ. ನಾನು ಸ್ವತಃ ಚೆಕ್‌ಗೆ ಸಹಿ ಮಾಡಿ ನೀಡಿರುತ್ತೇನೆ ಎಂದು, ಪಿರ್ಯಾದುದಾರರು ಹೇಳುತ್ತಿರುವುದು ನಿಜವಲ್ಲ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆ ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.